# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಪಶ್ಚಿಮ ವಲಯ, ಜಾಹೀರಾತು-ವಿಭಾಗ


**2024-25**

**ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 4(1)ಎ ರಂತೆ ಪ್ರಕಟಿಸಲಾಗಿದೆ**

I <u>ಪಶ್ಚಿಮ ವಲಯ, ಜಾಹೀರಾತು-ವಿಭಾಗ ಕಛೇರಿಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳು:</u>

**ಅ) ಕಛೇರಿಯ ಹೆಸರು:** ಸಹಾಯಕ ಕಂದಾಯ ಅಧಿಕಾರಿ ರವರ ಕಛೇರಿ, ಜಾಹೀರಾತು-ಪಶ್ಚಿಮ ವಿಭಾಗ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ. ಬೆಂಗಳೂರು - 560 020.

**ಆ) ರಚನೆ:** -




ಸಹಾಯಕ ಕಂದಾಯ ಅಧಿಕಾರಿ
ಜಾಹೀರಾತು ವಿಭಾಗ (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ





File No. BBMP-JC0WZ(RTI)/2/2025-JC-WEST (Computer No. 131133)
Generated from eOffice by KUMAR M ARER, BBMP-DCIO-SDA(KMA), SECOND DIVISION ASSISTANT, BRUHAT BENGALURU MAHANAGARA PALIKE on 04/04/2025 03:27 PM

೩) **ಕಾರ್ಯಗಳು ಮತ್ತು ಕರ್ತವ್ಯಗಳು** : ಪಶ್ಚಿಮ ವಲಯದ ಜಾಹೀರಾತು ವಿಭಾಗವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಒಂದು ಪ್ರಮುಖವಾದ ವಿಭಾಗವಾಗಿರುತ್ತದೆ, ಈ ಕಛೇರಿಯು ಬಿಬಿಎಂಪಿ ಕಾಯ್ದೆ-2020, 1976ರ ಕೆ.ಎಂ.ಸಿ ಕಾಯ್ದೆ ಸೆಕ್ಷನ್ 134, 135, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರಡಿಸಿರುವ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶದ ಉಪವಿಧಿಗಳು-2018 ರಡಿಯಲ್ಲಿ ಹಾಗೂ ಮಾನ್ಯ ಮುಖ್ಯ ಆಯುಕ್ತರುರವರ ಆದೇಶದಂತೆ ವಲಯ ಮಟ್ಟದಲ್ಲಿ ಜಾಹೀರಾತುಗಳನ್ನು ನಿಯಂತ್ರಿಸುವುದು ವಿವಿಧ ಮಾದರಿಯ ಜಾಹೀರಾತುಗಳಿಗೆ ಜಾಹೀರಾತು ಶುಲ್ಕವನ್ನು ಪಡೆದು ಅನುಮತಿ ನೀಡುವ ಮೂಲಕ ಪಾಲಿಕೆಯ ಬೊಕ್ಕಸಕ್ಕೆ ವರಮಾನವನ್ನು ತಂದುಕೊಡುವ ಪಾತ್ರವನ್ನು ವಹಿಸುತ್ತದೆ. ಈ ವಿಭಾಗವು ವಲಯದ ಮುಖ್ಯಸ್ಥರಾದ ವಲಯ ಆಯುಕ್ತರು, ವಲಯ ಜಂಟಿ ಆಯುಕ್ತರು ಹಾಗೂ ಉಪ ಆಯುಕ್ತರವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ.

II **ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು:**

1. **ವಲಯ ಆಯುಕ್ತರು (ಪಶ್ಚಿಮ):**

ಪಶ್ಚಿಮ ವಲಯದ ಜಾಹೀರಾತು ವಿಭಾಗದ ಸಂಪೂರ್ಣ ಮೇಲ್ವಿಚಾರಣಾ ಅಧಿಕಾರ ಹೊಂದಿರುತ್ತಾರೆ.

2. **ವಲಯ ಜಂಟಿ ಆಯುಕ್ತರು (ಪಶ್ಚಿಮ) :**

ಜಾಹಿರಾತುಗಳಿಗೆ ಸಂಬಂಧಿಸಿದಂತೆ ಪಶ್ಚಿಮ ವಲಯ ವ್ಯಾಪ್ತಿಯ ಸಂಪೂರ್ಣ ನಿಯಂತ್ರಣ ಅಧಿಕಾರಿಗಳಾಗಿರುತ್ತಾರೆ. ವಲಯ ವ್ಯಾಪ್ತಿಯಲ್ಲಿ ಬರುವಂತಹ ಅಂಗಡಿ ಮುಂಗಟ್ಟುಗಳ ನಾಮಫಲಕಗಳಲ್ಲಿನ ಸ್ವಯಂ ಜಾಹೀರಾತುಗಳಿಗೆ ಅನುಮತಿಸುವುದು/ತಿರಸ್ಕರಿಸುವುದು ಮತ್ತು ಅನಧಿಕೃತ ಜಾಹಿರಾತುಗನ್ನು ನಿಯಂತ್ರಿಸುವ ಅಧಿಕಾರ ಹೊಂದಿರುತ್ತಾರೆ.

3. **ಉಪ ಆಯುಕ್ತರು (ಪಶ್ಚಿಮ) :**

ಪಶ್ಚಿಮ ವಲಯ ಜಾಹೀರಾತು ಶಾಖೆಯ ಮುಖ್ಯಸ್ಥರಾಗಿರುತ್ತಾರೆ. ಜಾಹೀರಾತು ಶಾಖೆಗೆ ಸಂಬಂಧಿಸಿದಂತೆ ಕಡತಗಳನ್ನು ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಮಂಜೂರು ಮಾಡಲು ಅಥವಾ ತಿರಸ್ಕರಿಸಲು ಶಿಫಾರಸ್ಸು ಮಾಡುವ ಅಧಿಕಾರ ಹೊಂದಿರುತ್ತಾರೆ.

4. **ಸಹಾಯಕ ಕಂದಾಯ ಅಧಿಕಾರಿಗಳು(ಜಾಹೀರಾತು-ಪಶ್ಚಿಮ)**

ವಲಯ ವ್ಯಾಪ್ತಿಯಲ್ಲಿ ಬರುವಂತಹ ಅಂಗಡಿ ಮುಂಗಟ್ಟುಗಳ ನಾಮಫಲಕಗಳಲ್ಲಿನ ಸ್ವಯಂ ಜಾಹೀರಾತುಗಳಿಗೆ ಸಂಬಂಧಪಟ್ಟಂತೆ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಶೀಲಿಸಿ, ಆಯಾ ಉಪವಿಭಾಗದ ಕಂದಾಯ ಮೌಲ್ಯಮಾಪಕರ/ಕಂದಾಯ ಪರಿವೀಕ್ಷರ ಸ್ಥಳ ಪರಿಶೀಲನಾ ವರದಿ, ಆಯಾ ಉಪ ವಿಭಾಗದ ಸಹಾಯಕ ಕಂದಾಯ ಅಧಿಕಾರಿ ಮತ್ತು ಕಂದಾಯ ಅಧಿಕಾರಿಗಳ ವರದಿಯನ್ನಾಧರಿಸಿ ಉಪ ಆಯುಕ್ತರ ಮೂಲಕ ವಲಯ ಜಂಟಿ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು .ಅನುಮತಿ ನೀಡುವ ಅಧಿಕಾರ ಹೊಂದಿರುತ್ತಾರೆ. ವಲಯ ಜಾಹೀರಾತು ವಿಭಾಗಕ್ಕೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಕಾಯ್ದೆ-2005ರಡಿಯಲ್ಲಿ ಮಾಹಿತಿ ಒದಗಿಸಲು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿರುತ್ತಾರೆ. ಜಾಹೀರಾತು ಸಂಬಂಧಿತ ಅಂಕಿ ಅಂಶಗಳನ್ನು, ಮಾಹಿತಿಗಳನ್ನು ಉಪವಿಭಾಗದಿಂದ ಸಂಗ್ರಹಿಸಿ, ಕ್ರೋಢಿಕರಿಸಿ ಮೇಲಾಧಿಕಾರಿಗಳ ಸಹಿಯೊಂದಿಗೆ ಕೇಂದ್ರ ಕಛೇರಿ ಜಾಹೀರಾತು ವಿಭಾಗಕ್ಕೆ ಸಲ್ಲಿಸುವ ಕಾರ್ಯಗಳೊಂದಿಗೆ ಕಾಲಕಾಲಕ್ಕೆ ಮೇಲಾಧಿಕಾರಿಗಳು ನೀಡುವ ನಿರ್ದೇಶನ/ಆದೇಶಂತೆ ಕಾರ್ಯ ನಿರ್ವಹಿಸುತ್ತಾರೆ.

ಸಹ ಕಂದಾಯ ಅಧಿಕಾರಿ
ಜಾಹೀರಾತು ವಿಭಾಗ (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

-2-



File No. BBMP-JC0WZ(RTI)/2/2025-JC-WEST (Computer No. 131133)
Generated from eOffice by KUMAR M ARER, BBMP-DCIO-SDA(KMA), SECOND DIVISION ASSISTANT, BRUHAT BENGALURU MAHANAGARA PALIKE on 04/04/2025 03:27 PM

5. **ಕಂದಾಯ ಪರಿವೀಕ್ಷಕರು**

ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಅನಧೀಕೃತ ಜಾಹೀರಾತು ಅಳವಡಿಕೆ ನಿಯಂತ್ರಿಸುವ ನಿಟ್ಟಿನಲ್ಲಿ ಸ್ಥಳ ಪರಿಶೀಲನೆ ನಡೆಸಿ, ಅನಧೀಕೃತ ಜಾಹೀರಾತು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ತೆರವುಗೊಳಿಸುವ ಹಾಗೂ ಮೇಲಾಧಿಕಾರಿಗಳು ನೀಡುವ ನಿರ್ದೇಶನ/ಆದೇಶಂತೆ ಕಾರ್ಯನಿರ್ವಹಿಸುತ್ತಾರೆ.

6. **ಪ್ರಥಮ ದರ್ಜೆ ಸಹಾಯಕರು :**

ಪಶ್ಚಿಮ ವಲಯ ಜಾಹೀರಾತು ವಿಭಾಗದ ಕಡತ, ಅರ್ಜಿಗಳ, ಸಾಮಾನ್ಯ ಪತ್ರಗಳ ಮತ್ತು ಮಾಹಿತಿ ಹಕ್ಕು ಕಾಯ್ದೆ ಅರ್ಜಿಗಳ ಸ್ವೀಕೃತಿ, ರವಾನೆ ಹಾಗೂ ಹಾಗೂ ಕಡತಗಳ ನಿರ್ವಹಣೆ, ಜಾಹೀರಾತು ಸಂಬಂಧಿತ ಅಂಕಿ ಅಂಶಗಳ ನಿರ್ವಹಣೆ ಹಾಗೂ ಮಾಹಿತಿ ಹಕ್ಕು ಕಾಯ್ದೆ ಅರ್ಜಿಗಳಿಗೆ ನಿಗದಿತ ಸಮಯದಲ್ಲಿ ಮಾಹಿತಿ ಒದಗಿಸಿ ಕಡತಗಳನ್ನು ನಿರ್ವಹಿಸಿ ಮೇಲಾಧಿಕಾರಿಗಳು ಸೂಚಿಸುವ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.

III. **ಮೇಲ್ವಿಚಾರಣೆ ಮತ್ತು ಜವಾಬ್ದಾರಿಗಳನ್ನು ಒಳಗೊಂಡಂತೆ ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು :**

ಬಿಬಿಎಂಪಿ ಕಾಯ್ದೆ-2020, 1976ರ ಕೆ.ಎಂ.ಸಿ ಕಾಯ್ದೆ ಸೆಕ್ಷನ್ 134, 135 , ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರಡಿಸಿರುವ ಹೊರಾಂಗಣ ಜಾಹೀರಾತು ಮತ್ತು ಸಾರ್ವಜನಿಕ ಸಂದೇಶದ ಉಪವಿಧಿಗಳು-2018 ರಡಿಯಲ್ಲಿ ಹಾಗೂ ಮಾನ್ಯ ಮುಖ್ಯ ಆಯುಕ್ತರುರವರು ಹಾಗೂ ಮೇಲಧಿಕಾರಿಗಳು ನೀಡುವ ನಿರ್ದೇಶನಗಳಂತೆ.

IV. **ಜಾಹೀರಾತು ಇಲಾಖೆಯ ಕಾರ್ಯನಿರ್ವಹಣೆಗೆ ರೂಪಿಸಿರುವ ಸೂತ್ರಗಳು :**

ಬಿಬಿಎಂಪಿ ಕಾಯ್ದೆ-2020, ಕೆ.ಎಂ.ಸಿ ಕಾಯ್ದೆ-1976 **ಬೆಂಗಳೂರು ಮಹಾನಗರ ಪಾಲಿಕೆಯ ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶದ ಉಪ ವಿಧಿಗಳು-2018 ರಲ್ಲಿ** ನಿಗದಿಪಡಿಸಿರುವ ಮಾನದಂಡಗಳು, ಹಾಗೂ ಮಾನ್ಯ ಮುಖ್ಯ ಆಯುಕ್ತರುರವರು ಹಾಗೂ ಮೇಲಧಿಕಾರಿಗಳು ಕಾಲಕಾಲಕ್ಕೆ ನೀಡುವ ನಿರ್ದೇಶನಗಳನ್ನು ಸೂಚನೆಗಳನ್ನು ಪಾಲಿಸಿ ಕ್ರಮ ವಹಿಸಲಾಗುತ್ತಿದೆ.

V. **ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು :**

ಬಿಬಿಎಂಪಿ ಕಾಯ್ದೆ-2020, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976, ಜಾಹೀರಾತು **ಬೆಂಗಳೂರು ಮಹಾನಗರ ಪಾಲಿಕೆಯ ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶದ ಉಪ ವಿಧಿಗಳು-2018,** ಕಛೇರಿ ಕೈಪಿಡಿ 1979, ಕೆ.ಸಿ.ಎಸ್.ಆರ್, .ಸಿ.ಸಿ.ಎ ನಿಯಮಾವಳಿಗಳು ಹಾಗೂ ಸರ್ಕಾರ ಮತ್ತು ಪಾಲಿಕೆಯ ಸಭೆಯು ತೆಗೆದುಕೊಳ್ಳುವ ನಿರ್ಣಯಗಳಂತೆ ಕ್ರಮ ವಹಿಸಲಾಗುವುದು.

VI. **ಇಲಾಖೆ ಹೊಂದಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರಣಾ ಪಟ್ಟಿ:-**

1. ಜಾಹೀರಾತು ಅನುಮತಿ ರೆಜಿಸ್ಟರ್
2. ಸ್ಟಾಕ್ ಪುಸ್ತಕ
3. ಹಾಜರಾತಿ ಪುಸ್ತಕ
4. ನಗದು ವಹಿ
5. ಚಲನ ವಲನ ವಹಿಗಳು

-3-

ಸಹಾ ಕಂದಾಯ ಅಧಿಕಾರಿ
ಜಾಹೀರಾತು ವಿಭಾಗ (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



File No. BBMP-JC0WZ(RTI)/2/2025-JC-WEST (Computer No. 131133)
Generated from eOffice by KUMAR M ARER, BBMP-DCIO-SDA(KMA), SECOND DIVISION ASSISTANT, BRUHAT BENGALURU MAHANAGARA PALIKE on 04/04/2025 03:27 PM

6. ಪಿ ಆರ್ ಪುಸ್ತಕ
7. ಟಪಾಲು ಪುಸ್ತಕ
8. ಜಾಹೀರಾತು ಅನುಮತಿಸಿರುವ ಕಡತಗಳು:

VII. **ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು:-**

ಪಶ್ಚಿಮ ವಲಯ ವ್ಯಾಪ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಸ್ವ- ಜಾಹೀರಾತು ಪ್ರದರ್ಶನಕ್ಕಾಗಿ ಅನುಮತಿ ಕೋರಿರುವ ಅರ್ಜಿಗಳನ್ನು ಸ್ವೀಕರಿಸಿ ಬಿಬಿಎಂಪಿ ಕಾಯ್ದೆ-2020, 1976 ಕೆ.ಎಂ.ಸಿ ಕಾಯ್ದೆ ಅಡಿಯಲ್ಲಿ ಹಾಗೂ 2018ರ ಜಾಹೀರಾತು ಬೈಲಾಗಳ ಅಡಿಯಲ್ಲಿ ಮೇಲಧಿಕಾರಿಗಳು ರಚಿಸಿ ನೀಡುವ ಕಾರ್ಯನೀತಿಯಂತೆ ಕಾರ್ಯನಿರ್ವಹಿಸಲಾಗುವುದು.

VIII. **ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರಪಟ್ಟಿಕೆಯನ್ನು:**

ಮೇಲಧಿಕಾರಿಗಳು ಜಾಹೀರಾತು ಶಾಖೆಗೆ ಸಂಬಂಧಿಸಿದಂತೆ, ತೆಗೆದುಕೊಳ್ಳುವ / ನೀಡುವ ನಿರ್ಣಯಗಳು ಸಾರ್ವಜನಿಕರಿಗೆ ದೊರೆಯುತ್ತವೆ.

IX & X. **ಅದರ ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆಯನ್ನು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು :- ಮಾರ್ಚ್-2025 ರ ಅಂತ್ಯಕ್ಕೆ**

| ಕ್ರ.ಸ | ಹೆಸರು ಮತ್ತು ಹುದ್ದೆ | ಕಛೇರಿ ವಿಳಾಸ | ಮೂಲ ವೇತನ |
|---|---|---|---|
| 1. | ಶ್ರೀಮತಿ. ಜಯಶ್ರೀ. ಎಸ್. ಅಂಬಿಗೇರ<br>ಸಹಾಯಕ ಕಂದಾಯ ಅಧಿಕಾರಿ<br>(ಜಾಹೀರಾತು-ಪಶ್ಚಿಮ) | ಸಹಾಯಕ ಕಂದಾಯ ಅಧಿಕಾರಿ ರವರ ಕಛೇರಿ ಜಾಹೀರಾತು-ಪಶ್ಚಿಮ ವಿಭಾಗ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ. ಬೆಂಗಳೂರು - 560 020. | 85600 |
| 2. | ಶ್ರೀಮತಿ.ಕೀರ್ತಿ. ವಿ<br>ಪ್ರಥಮ ದರ್ಜೆ ಸಹಾಯಕರು | ಸಹಾಯಕ ಕಂದಾಯ ಅಧಿಕಾರಿ ರವರ ಕಛೇರಿ ಜಾಹೀರಾತು-ಪಶ್ಚಿಮ ವಿಭಾಗ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ. ಬೆಂಗಳೂರು - 560 020. | ವೇತನ ಬಟವಾಡೆ ಸ್ಥಳ ಸಹಾಯಕ ಆಯುಕ್ತರು (ಆಡಳಿತ-ಪಶ್ಚಿಮ) |
| 3. | ಶ್ರೀ. ನರಸಿಂಹ<br>ದ್ವಿತಿಯ ದರ್ಜೆ ಸಹಾಯಕರು | ಓ.ಓ.ಡಿ ಆಧಾರದ ಮೇಲೆ ಅಧೀಕ್ಷಕ ಅಭಿಯಂತರರು(ಪಶ್ಚಿಮ) ಇವರ ಕಛೇರಿ | 42300 |
| 4. | ಶ್ರೀ. ಮೂರ್ತಿ ಕೆ. ಎ.<br>ಕಂದಾಯ ಪರಿವೀಕ್ಷಕರು | ಸಹಾಯಕ ಕಂದಾಯ ಅಧಿಕಾರಿ ರವರ ಕಛೇರಿ ಜಾಹೀರಾತು-ಪಶ್ಚಿಮ ವಿಭಾಗ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ. ಬೆಂಗಳೂರು - 560 020. | 51550 |

-4-

ಸಹ ಕಂದಾಯ ಅಧಿಕಾರಿ
ಜಾಹೀರಾತು ವಿಭಾಗ (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



File No. BBMP-JC0WZ(RTI)/2/2025-JC-WEST (Computer No. 131133)
Generated from eOffice by KUMAR M ARER, BBMP-DCIO-SDA(KMA), SECOND DIVISION ASSISTANT, BRUHAT BENGALURU MAHANAGARA PALIKE on 04/04/2025 03:27 PM

XI. **ಯಾವ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ನಿಗದಿಪಡಿಸಲಾದ ಅನುದಾನ ವಿವರಗಳು:-**

**2024-25 ನೇ ಸಾಲಿಗೆ**

ಈ ವಿಭಾಗಕ್ಕೆ ಪ್ರತ್ಯೇಕವಾಗಿ ಯಾವುದೇ ಅನುದಾನ ನಿಗದಿಯಾಗಿರುವುದಿಲ್ಲ.

XII. **ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು:-**

ಈ ವಿಭಾಗಕ್ಕೆ ಅನ್ವಯಿಸುವುದಿಲ್ಲ.

XIII. **ಅದು ನೀಡಿರುವ ರಿಯಾಯಿತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳನ್ನು:-**

ಸ್ವ ಜಾಹೀರಾತು ಪದರದರ್ಶನಕ್ಕಾಗಿ ಜಾಹೀರಾತು ಶುಲ್ಕ ವಿಧಿಸಿ ಅನುಮತಿ ನೀಡಲಾಗುವುದು.

XIV. **ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರಗಳನ್ನು:-**

ಬಿಬಿಎಂಪಿ ಕಾಯ್ದೆ-2020, ಬೆಂಗಳೂರು ಮಹಾನಗರ ಪಾಲಿಕೆಯ ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶದ ಉಪ ವಿಧಿಗಳು-2018, ಸ್ವ ಜಾಹೀರಾತು ಸಂಬಂಧಿಸಿದಂತೆ ಸಾಮಾನ್ಯ ಅಂಕಿ ಅಂಶಗಳ ದಾಖಲೆಗಳು.

XV. **ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳನ್ನು:-**

ಈ ಶಾಖೆಗೆ ಅನ್ವಯಿಸುವುದಿಲ್ಲ.

XVI. **ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರೆ ವಿವರಗಳನ್ನು:-**

ಶ್ರೀಮತಿ.ಜಯಶ್ರೀ.ಎಸ್.ಅಂಚಿಗೇರ. ಸಹಾಯಕ ಕಂದಾಯ ಅಧಿಕಾರಿ (ಜಾಹೀರಾತು-ಪಶ್ಚಿಮ) ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು-560 020.

XVII. **ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು:-**

ಜಾಹೀರಾತು ಇಲಾಖೆಗೆ ಸಂಬಂಧಿಸಿದಂತೆ, ಸಾಮಾನ್ಯ ಮಾಹಿತಿಗಾಗಿ ಪಾಲಿಕೆಯ ವೆಬ್‌ಸೈಟ್ ವಿಳಾಸ:

www.bbmp.gov.in

ಸಹಾಯಕ ಕಂದಾಯ ಅಧಿಕಾರಿ (ಜಾಹೀರಾತು-ಪಶ್ಚಿಮ)
ಹಾಗೂ
ಸಾರ್ವಜನಿಕ ಮಾಹಿತಿ ಅಧಿಕಾರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

-5-



File No. BBMP-JC0WZ(RTI)/2/2025-JC-WEST (Computer No. 131133)
Generated from eOffice by KUMAR M ARER, BBMP-DCIO-SDA(KMA), SECOND DIVISION ASSISTANT, BRUHAT BENGALURU MAHANAGARA PALIKE on 04/04/2025 03:27 PM